

## ಮರಳಿ ಬಂದ ಪ್ರಿಯಾಂಕಾ

ಮೂರು ವರ್ಷಗಳ ಬಳಿಕ ಪ್ರಿಯಾಂಕಾ ಚೋಪ್ರಾ ಬಾಲಿವುಡ್ ಬೆಳ್ಳಿತೆರೆಗೆ ಮರಳಿ ಬಂದಿದ್ದಾಳೆ. ಮದುವೆಯ ಸಂಭ್ರಮಗಳೆಲ್ಲ ಮುಗಿದು ಆಕೆಯೀಗ ಮುಂಬೈವಾಸಿ. ಫರ್ಹಾನ್ ಅಖ್ತರ್ ಜೊತೆಗೆ ಆಕೆ ನಟಿಸುತ್ತಿರುವ 'ದಿ ಸ್ಕೈ ಈಸ್ ಪಿಂಕ್' ಸಿನಿಮಾದ ಕೊನೆಯ ಹಂತದ ಚಿತ್ರೀಕರಣ ಮಾರ್ಚ್‌ನಲ್ಲಿ ಆರಂಭವಾಗಲಿದೆ; ಅಕ್ಟೋಬರ್‌ನಲ್ಲಿ ಚಿತ್ರ ತೆರೆ ಕಾಣಲಿದೆ.

ಹಿಂದಿನ ಚಿತ್ರಗಳಿಗೆ ಹೋಲಿಸಿದರೆ ಪ್ರಿಯಾಂಕಾಗೆ ಇದರಲ್ಲಿ ಅಭಿನಯಕ್ಕೆ ಅವಕಾಶ ಇರುವ ವಿಭಿನ್ನ ಪಾತ್ರವಿದೆ. ಆಯಿಷಾ ಚೌಧುರಿ ಎಂಬ ಸಾಹಸಿ ಬಾಲಕಿಯ ನೈಜ ಕಥೆಯಾಧಾರಿತ ಚಿತ್ರವಿದು. 13ರ ಹರೆಯದಲ್ಲೇ ಶ್ವಾಸಕೋಶದ ಕಾಯಿಲೆಗೆ ತುತ್ತಾದ ಆಯಿಷಾ, ಅತ್ಯುತ್ತಮ 'ವ್ಯಕ್ತಿತ್ವ ವಿಕಸನ ಮಾತುಗಾರ್ತಿ'ಯಾಗಿ ಬೆಳೆದ ಕಥೆ. 19ರ ಹರೆಯದಲ್ಲಿ ಎರಡು ವರ್ಷಗಳ ಹಿಂದೆ ತೀರಿಕೊಂಡ ಈ ಪ್ರತಿಭೆಯ ಪಾತ್ರವನ್ನು 'ದಂಗಲ್' ಖ್ಯಾತಿಯ ಝೈರಾ ವಾಸಿಂ ನಿರ್ವಹಿಸಿದ್ದಾರೆ. ಆಕೆಯ ತಾಯಿಯ ಪಾತ್ರ ಪ್ರಿಯಾಂಕಾಳದ್ದು. ಆಯಿಷಾ ಬರೆದ ಪುಸ್ತಕ 'ಮೈ ಲಿಟಲ್ ಎಪಿಫನೀಸ್' ಅತ್ಯಂತ ಜನಪ್ರಿಯವಾಗಿದೆ. ಪ್ರಿಯಾಂಕಾ ನಟನೆಯ ಬಗ್ಗೆ ಈಗಾಗಲೆ ಚಿತ್ರತಂಡದಿಂದ ಮೆಚ್ಚುಗೆ ವ್ಯಕ್ತವಾಗಿದೆ. ■



## ಎಲೈಟ್ ಕ್ಲಬ್‌ಗೆ ರಣ್‌ವೀರ್

ರಣ್‌ವೀರ್ ಸಿಂಗ್‌ನನ್ನು ಬಾಲಿವುಡ್‌ನಲ್ಲಿ ಸದ್ಯಕ್ಕೆ ಹಿಡಿಯುವವರು ಯಾರೂ ಇಲ್ಲ. 'ಗಲ್ಲಿ ಬಾಯ್' ಗಲ್ಲಾಪೆಟ್ಟಿಗೆಯಲ್ಲಿ ಗೆದ್ದಿದೆ. ಈಗ ಆತನ ಕಾಲ್‌ಷೀಟ್‌ಗಾಗಿ ಕಾಯುತ್ತಿರುವ ನಿರ್ಮಾಪಕರ ಕ್ಯೂ ದೊಡ್ಡದಿದೆ. 2018ರಲ್ಲಿ 'ಪದ್ಮಾವತ್' ಯಶಸ್ಸಿನಿಂದ ಶುರುವಾದ ರಣ್‌ವೀರ್‌ನ ಓಟ ಈ ವರ್ಷವೂ ಅದೇ ಸ್ಪೀಡ್‌ನಲ್ಲಿ ಮುಂದುವರಿಯುತ್ತಿದೆ. ಮುಟ್ಟಿದ್ದೆಲ್ಲ ಚಿನ್ನವಾಗುತ್ತಿರುವ ನಟನೀತ. ಕಳೆದ ವರ್ಷದ ಕೊನೆಗೆ ಬಿಡುಗಡೆಯಾದ 'ಸಿಂಬ' ಕೂಡಾ ಸಾಕಷ್ಟು ಹಣ ದೋಚಿತು. ಈ ಹಿನ್ನೆಲೆಯಲ್ಲಿ ಈಗ ರಣ್‌ವೀರ್‌ನನ್ನು ಈಗ ನಿರ್ಮಾಪಕರು 'ಎ' ಲಿಸ್ಟ್ ಹೀರೊ ಎಂದು ಪರಿಗಣಿಸುತ್ತಿದ್ದಾರೆ. ಅಂದರೆ ಬಾಲಿವುಡ್‌ನಲ್ಲಿ ತಮ್ಮದೇ ಸಾಮ್ರಾಜ್ಯವನ್ನು ಸ್ಥಾಪಿಸಿರುವ ಶಾರೂಕ್, ಸಲ್ಮಾನ್, ಅಮೀರ್ ಖಾನ್, ಅಜಯ್ ದೇವಗನ್ ಮತ್ತು ಅಕ್ಷಯ ಕುಮಾರ್– ಈ ನಟರ ಸಾಲಿಗೆ ಈಗ ರಣ್‌ವೀರ್ ಕೂಡಾ ಸೇರಿದ್ದಾನೆ.

'ಎ' ಲೀಸ್ಟ್ ನಟನಾಗುವುದರಿಂದ ಲಾಭವೆಂದರೆ ಆತ ನಟಿಸಿದ ಚಿತ್ರದ ಲಾಭದಲ್ಲಿ ಪಾಲು ಸಿಗುವುದು. ಖಾನ್‌ತ್ರಯರು ಮತ್ತು ಅಕ್ಷಯ್– ಅಜಯ್ ಎಲ್ಲರೂ ತಾವು ನಟಿಸಿದ ಸಿನಿಮಾಕ್ಕೆ ಭಾರಿ ಸಂಭಾವನೆ ಪಡೆಯುವುದಲ್ಲದೆ, ಆ ಚಿತ್ರದ ಲಾಭದಲ್ಲೂ ನಿರ್ದಿಷ್ಟ ಪ್ರಮಾಣದ ಪಾಲು ಪಡೆಯುತ್ತಾರೆ. ಕಳೆದ ವರ್ಷದ ಕೊನೆಯಲ್ಲಿ ರಣ್‌ವೀರ್ ದೊಡ್ಡ ಮೊತ್ತದ ಸಂಭಾವನೆ ಪಡೆಯಲು ಆರಂಭಿಸಿದ್ದ. ಈಗ ಅದರ ಜೊತೆಗೆ ಚಿತ್ರದ ಲಾಭದಲ್ಲೂ ದೊಡ್ಡ ಪ್ರಮಾಣದಲ್ಲಿ ಲಾಭ ಹಂಚಿಕೊಳ್ಳಲು ನಿರ್ಮಾಪಕರು ತಯಾರಾಗಿದ್ದಾರೆ. ಈ ವರ್ಷ ಬಿಡುಗಡೆಯಾಗಲಿರುವ 'ತಖ್ತ್' ಮತ್ತು '83' ಸಿನಿಮಾದಲ್ಲೂ ಈ ಲಾಭ ಹಂಚಿಕೆಯ ಸೂತ್ರಕ್ಕೆ ರಣ್‌ವೀರ್ ಸಹಿ ಹಾಕಿದ್ದಾನಂತೆ.

ಹಾಗೆಂದು ರಣ್‌ವೀರ್‌ನನ್ನು ನೀವು ಧನದಾಹಿ ಎನ್ನುವಂತಿಲ್ಲ! ಅದನ್ನು ಸಾಬೀತುಪಡಿಸುವ ಇತ್ತೀಚಿನ ಘಟನೆಯೊಂದು ಹೀಗಿದೆ. ಬಾಲಿವುಡ್‌ನ ಸೂಪರ್‌ಸ್ಟಾರ್‌ಗಳು, ಕೋಟಿಪತಿಗಳ ಮದುವೆಗಳಲ್ಲಿ ಭಾಗವಹಿಸಿ ಹಾಡಿ ಕುಣಿಯುವುದು ಇತ್ತೀಚೆಗೆ ಮಾಮೂಲಾಗಿದೆ. ಅದಕ್ಕೆ ಅವರಿಗೆ ಕೋಟಿಗಳ ಲೆಕ್ಕದಲ್ಲಿ ವಿಶೇಷ ಸಂಭಾವನೆಯೂ ಸಿಗುತ್ತದೆ. ಇತ್ತೀಚೆಗೆ ಶ್ರೀಮಂತ ಉದ್ಯಮಿಯೊಬ್ಬರು ತಮ್ಮ ಮಗಳ ಮದುವೆಯಲ್ಲಿ ಪಾಲ್ಗೊಂಡು ರಂಜಿಸಲು ರಣ್‌ವೀರ್‌ನನ್ನು ಕರೆದಿದ್ದರಂತೆ. 'ಅರ್ಧ ಗಂಟೆ ಕಾರ್ಯಕ್ರಮ ಸಾಕು, 2 ಕೋಟಿ ರೂಪಾಯಿ ಕೊಡುತ್ತೇವೆ' ಎಂದರಂತೆ. ಆದರೆ ರಣ್‌ವೀರ್ ಆ ಆಫರ್ ಅನ್ನು ನಯವಾಗಿಯೇ ತಿರಸ್ಕರಿಸಿದ್ದಾನೆ! ಹಾಗೆಂದು ವೇದಿಕೆಯ ಮೇಲೆ ಆತ ಕುಣಿಯುವುದಿಲ್ಲವೆಂದಲ್ಲ. ಕಳೆದ ವಾರ ಉದಯಪುರದಲ್ಲಿ ಗೆಳೆಯನೊಬ್ಬನ ಮದುವೆಗೆ ಹೋಗಿದ್ದ ಆತ, ವೇದಿಕೆಯ ಮೇಲೆ 'ಗಲ್ಲಿ ಬಾಯ್' ಚಿತ್ರದ ಸೂಪರ್‌ಹಿಟ್ ಹಾಡು 'ಅಪ್ನಾ ಟೈಮ್ ಆಯೇಗಾ'ಗೆ ಸಖತ್ತಾಗಿ ಕುಣಿದಿದ್ದಾನೆ!

■ ಹನಿ